ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ಶ್ರೀನಿವಾಸಪುರದಲ್ಲಿ ಪೋಲೀಸರಿಂದ ರೈತರ ಮೇಲೆ ದೌರ್ಜನ್ಯ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮೊನ್ನೆ ಶ್ರೀನಿವಾಸಪುರದಲ್ಲಿ ಏನು ಪೋಲೀಸರಿಂದ ರೈತರ ಮೇಲೆ ಮತ್ತು ವಿರೋಧ ಪಕ್ಷದ ಕಾರ್ಯಕರ್ತರ ಮೇಲೆ ದೌರ್ಜನ್ಯವಾಗಿದೆ ಅದರ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಗೃಹ ಮಂತ್ರಿಗಳು ಒಂದು ಹೇಳಿಕೆಯನ್ನು ಸಹಿತಾ ಕೊಟ್ಟಿದ್ದಾರೆ. ಅದಾದನಂತರ ಮಾನ್ಯ ರೇಷ್ಮೆ ಇಲಾಖೆಯ ಮಂತ್ರಿಗಳು ಕೋಲಾರ ಜಿಲ್ಲೆಗೆ ಹೋಗಿ ಅಲ್ಲಿ ಪೋಲೀಸರಿಂದ ಎಕ್ಸಸ್ ಆಗಿರತಕ್ಕಂಥಾದ್ದು ನಿಜ ಅನ್ನತಕ್ಕಂಥ ಮಾತನ್ನು ಸಹಿತ ಹೇಳಿದ್ದಾರೆ. ಪೋಲೀಸರಿಂದ ಎಕ್ಸಸ್ ಆಗಿದೆ. ಸಭಾನಾಯಕರು ಇಲ್ಲಿರುವುದರಿಂದಾಗಿ ಏಟು ತಿಂದಿರತಕ್ಕ ಜನ ಇದ್ದಾರೆ. ಈ ಘಟನೆ ನಡೆದು ಎಂಟು ದಿವಸವಾಗಿದೆ. ಸ್ವಾಮಿ. ಅವರಿಗೆ ಏಟು ಹೊಡೆದವರು ಪೋಲೀಸಿನವರು. ಅವರ ಮೈ ಮೇಲೆ ಇರತಕ್ಕಂಥ ಬಾಸುಂಡೆಗಳು, ಅಲ್ಲಿ ಹರಿದಿರತಕ್ಕಂಥ ರಕ್ತ ಇದನ್ನೆಲ್ಲಾ ನೋಡಿದರೆ ಬಹಳ ಅಮಾನುಷವಾದಂಥ, ಬಹಳ ಭಯಾನಕವಾಗಿರತಕ್ಕಂಥ ಒಂದು ದೃಶ್ಯ. ಅವರು ಇಲ್ಲಿಗೆ ಬಂದಿದ್ದಾರೆ. ದಯವಿಟ್ಟು ಮಾನ್ಯ ಸಭಾನಾಯಕರು, ಮಾನ್ಯ ಗೃಪ ಮಂತ್ರಿಗಳು ಅವರನ್ನು ಕರೆಯಿಸಿ ನೋಡಬೇಕು. ಪೋಲೀಸರು ಮಾಡಿರುವ ಅಮಾನುಷವಾದ ವರ್ತನೆ ಬಗ್ಗೆ ನಿಜವಾಗಲೂ ಸಹಿತ ನಾವೆಲ್ಲರೂ ತಲೆ ತಗ್ಗಿಸತಕ್ಕಬೇಕಾಗಿದೆ. ನಾವು ಅಧಿಕಾರದಲ್ಲಿರಲಿ, ನೀವು ಅಧಿಕಾರದಲ್ಲಿರಲಿ, ಇದೇ ಪೋಲೀಸರಿಂದ ಸರ್ಕಾರದ ಆಡಳಿತ ಯಂತ್ರವನ್ನು ನಡೆಸಬೇಕಾಗುತ್ತದೆ ಎನ್ನುವ ಅರ್ಥ ನಮಗಾಗುತ್ತದೆ. There is a limit ಅವರ ಇತಿಮಿತಿಗಳನ್ನು ಅವರಿಗೆ ಅರ್ಥಮಾಡಿಕೊಡಬೇಕಾಗುತ್ತದೆ. ತಾವು ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆಯನ್ನೇ ಮಾಡಿಸಿ. ಇಲ್ಲದಿದ್ದರೆ ಸರ್ಕಾರಕ್ಕೆ ಬಹಳ ಕೆಟ್ಟ ಹೆಸರು ಬರುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಅಲ್ಲಿ, ಜನಗಳು ಬಹಳ ಬೇಸತ್ತಿದ್ದಾರೆ. ಮಾನ್ಯ ಮಂತ್ರಿಗಳು ಸಹಿತ ಅಲ್ಲಿಗೆ ಹೋಗಿ ಹೌದು ಪೋಲೀಸರಿಂದ ದೌರ್ಜನ್ಯವಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿಯೂ ಬಂದಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಅಲ್ಲಿ ಯಾವ ರೀತಿಯಲ್ಲಿ ಅಮಾನುಷವಾದಂಥ ಹಲ್ಲೆ ನಡೆದಿದೆಯೆನ್ನತಕ್ಕಂಥಾದ್ದನ್ನು ತಾವೂ ಕಣ್ಣಾರೆ ಅವರನ್ನು ಕಂಡಿದ್ದೀರಿ. ಅದು ಅಷ್ಟಕ್ಕೇ ನಿಲ್ಲಲಿಲ್ಲ ಮಾನ್ಯ ಅಧ್ಯಕ್ಷರೇ, ಪೋಲೀಸ್ ಠಾಣೆಗೆ ಹೋದಂಥ ಸಂದರ್ಭದಲ್ಲಿ ನಿಮಗೆ ವಿದ್ಯುತ್ ಬೇಕಾಗಿದ್ದರೆ ಅಥವಾ ರೋಗರಹಿತವಾದ ರೇಷ್ಮೆ ಮೊಟ್ಟೆ ಬೇಕಾಗಿದ್ದರೆ ಅಥವಾ ಗೊಬ್ಬರದ ಬೆಲೆ ಇಳಿಯಬೇಕಾಗಿದ್ದರೆ ನಿಮ್ಮ ಮನೆಯಲ್ಲಿರತಕ್ಕಂಥ ಹೆಂಗಸರನ್ನು ಕಳಿಹಿಸಿ ಅನ್ನತಕ್ಕಂಥ ಭಾಷೆಯನ್ನು ಬಳಸಿದ್ದಾರೆ.

ಇದು ಎಂಥ ಅಮಾನುಷ? ಮತ್ತು ಮಹಿಳೆಯರ ಬಗ್ಗೆ ಎಷ್ಟು ಅಗೌರವಯುತವಾಗಿ ನಡೆದುಕೊಂಡಿದ್ದಾರೆ. ಮಾನ್ಯ ಸಚಿವರು ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆನ್ನತಕ್ಕ ಮಾತನ್ನು ಹೇಳಿದ್ದಾರೆ, ಆದರೆ ಇಲ್ಲಿಯವರೆಗೂ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇವತ್ತಿನ ದಿವಸ ನೀವು ಅಧಿಕಾರದಲ್ಲಿದ್ದೀರಿ, ನಾಳೆ ಯಾರು ಅಧಿಕಾರಕ್ಕೆ ಬರುತ್ತಾರೆಂದು ಗೊತ್ತಿಲ್ಲ. ನೀವು ಆ ಕಡೆ ಬಿಟ್ಟು ಈ ಕಡೆ ಬಂದಾಗ ನಿಮಗೂ ಕೂಡ ಅಂಥ ಪರಿಸ್ಥಿತಿಯಾದಾಗ ನಿಮಗೆ ಏನು ಅನಿಸಬಹುದು ಎನ್ನತಕ್ಕಂಥಾದ್ದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು. ಇದರಲ್ಲಿ ಆ ಕಡೆ ಕುಳಿತಿರತಕ್ಕಂಥವರು, ಈ ಕಡೆ ಕಳುತಿರತಕ್ಕಂಥವರು ಎನ್ನುವ ಪ್ರಶ್ನೆ ಇಲ್ಲ. ಆ

ಪ್ರಶ್ನೆ ಏನು? ರೈತರ ಮೇಲೆ ನಡೆದಿರತಕ್ಕಂಥ ಹಲ್ಲೆ, ರೈತರ ಮೇಲೆ ನಡೆದಿರತಕ್ಕಂಥ ದಬ್ಬಾಳಿಕೆ, ರೈತರ ಮೇಲೆ ನಡೆದಿರತಕ್ಕಂಥ ದುಷ್ಕೃತ್ಯ,

(ಗೊಂದಲ)

ಅಧ್ಯಕ್ಷರು : ಇದರ ಬಗ್ಗೆ ಈಗಾಗಲೇ ಪ್ರಸ್ತಾಪ ಆಗಿದೆ.

ಇದನ್ನು ನಾವೆಲ್ಲರೂ ಸೇರಿ ಖಂಡಿಸಬೇಕಾದದ್ದು ನಮ್ಮ ಕರ್ತವ್ಯ. ಯಾರೇ ಆಗಿರಬಹುದು. ಯಾವುದೇ ಪಕ್ಷದ ಸದಸ್ಯರು ಆಗಿರಬಹುದು. ಏನೇ ಆಗಿರಬಹುದು. ಇಲ್ಲಿಯವರೆಗೆ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು : ಏನು ಮಾಡಬೇಕು ಎಂದು ನೀವು ಬಯಸುತ್ತೀರಿ ?

ಶ್ರೀ ಸಿ. ಬೈರೇಗೌಡ : ಸರ್ಕಾರ ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರದ ಮೇಲೆ ನಂಬಿಕೆ ಇತ್ತು.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ, ದೌರ್ಜನ್ಯ ಮಾಡುವಂಥ ಅಧಿಕಾರಿಗಳ ಪರವಾಗಿದೆಯೋ ಅಥವಾ ರೈತರ ಪರವಾಗಿದೆಯೋ? ತಾವು ನೋಡಿದ್ದೀರಿ, ಪರಿಸ್ಥಿತಿ ಏನು ಆಗಿದೆ. ಕ್ರಮ ತೆಗೆದುಕೊಳ್ಳುತ್ತೇವೆಂದು ಹೋಂ ಮಿನಿಸ್ಟರ್ ಹೇಳಿದರು..

(ಗೊಂದಲ)

ಶ್ರೀ ಸಿ. ಬೈರೇಗೌಡ : ಅದರಿಂದ ನೀವು ನೋಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ರೈತರನ್ನು ಹೋಗಿ ನೋಡಿ ಬಂದಿದ್ದೇನೆ. ಪಕ್ಕದ ರೂಮಿನಲ್ಲಿಯೇ ಕುಳಿತ್ತಿದ್ದಾರೆ. ಸುಮಾರು 8 ಜನ, ಅವರೂ ರಾಜಕಾರಣಿಗಳು. ಅನೇಕ ಸಂಘಸಂಸ್ಥೆಗಳಲ್ಲಿ ಅಧ್ಯಕ್ಷರಾಗಿರತಕ್ಕವರು. ನಾನು ನೋಡಿದೆ, ಇಂತಹ ಒಂದು ನರಕ ಯಾತನೆ, ಇದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನಗೆ ಅನಿಸುತ್ತದೆ ಇದು ನಿಮ್ಮ ಗಮನಕ್ಕೂ ಬಂದಿರಬಹುದು. ನಿಮ್ಮ ಬಗ್ಗೆ ವೈಯುಕ್ತಿಕವಾಗಿ ಆರೋಪ ಮಾಡುತ್ತಿಲ್ಲ, ನಿಮ್ಮ ಗಮನಕ್ಕೆ ಬಂದಿದೆ. ತಾವು ನೋಡಬೇಕು. ತಮ್ಮನ್ನೂ ಭೇಟಿ ಮಾಡಿದರು ಎಂದು ಹೇಳಿದರು. ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳ, ಮಾನ್ಯ ಗೃಹ ಮಂತ್ರಿಗಳಮ್ಮ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದರಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು, ಸಮಗ್ರವಾಗಿ ಆಗಲೇಬೇಕು. ಇಲ್ಲದಿದ್ದರೆ ಸಾಧ್ಯ ಇಲ್ಲ, ಅವರುಗಳು ನಡುಗಿ ಊರುಗಳನ್ನು ಬಿಟ್ಟು ಬಿಟ್ಟು ಹೋಗಿದ್ದಾರೆ. ರೈತರುಗಳು ಶ್ರೀನಿವಾಸಪುರವನ್ನು ಬಿಟ್ಟು ಹೋಗಿದ್ದಾರೆ. ನಿಮಗೆ ತೋರಿಸುತ್ತೇನೆ. ಅವರಿಗೆ ಹೊಡೆದಿರತಕ್ಕದ್ದನ್ನು ನೋಡಿ.ಹೇಗೆ ಹೊಡೆದಿದ್ದಾರೆ ಎಂದು.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ರಕ್ತಸಿಕ್ತವಾದ ಬಟ್ಟೆಗಳನ್ನು ಸಭೆಯಲ್ಲಿ ಪ್ರದರ್ಶನ ಮಾಡಿದರು)

ಒಬ್ಬ ಮಾನ್ಯ ಸದಸ್ಯರು : ಪಾಯಿಂಟ್ ಆಫ್ ಆರ್ಡರ್..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಪ್ರಾಮಾಣಿಕವಾದ ವಿಚಾರ. ಉದ್ರೇಕಕಾರಿ ಆಗುವಂತಹ ಚಿತ್ರವನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಆಲ್‌ರೈಟ್ ನೀವು ಈಗಾಗಲೇ ಪ್ರಸ್ತಾಪ ಮಾಡಿದ್ದೀರಿ..

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ಈ ಪರಿಸ್ಥಿತಿಯನ್ನು ಗಮನಿಸಿ ತಕ್ಷಣ ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ನ್ಯಾಯಾಂಗ ತನಿಖೆ ಮಾಡಿಸಬೇಕು. ನ್ಯಾಯಾಂಗ ತನಿಖೆ ಮಾಡಲು ನಿಮಗೆ ಏನು ತೊಂದರೆ ಇದೆ.

(ಗೊಂದಲ)

ಅಧ್ಯಕ್ಷರು : ಯಾವ ರೂಲ್ಸ್ ಪ್ರಕಾರ ನೀವು ಮಾತನಾಡುತ್ತಿದ್ದೀರಿ..

ನೀವು ಈಗಾಗಲೇ ಸದನದ ಗಮನಕ್ಕೆ ಈ ವಿಚಾರವನ್ನು ತಂದಿದ್ದೀರಿ..

(ಗೊಂದಲ)

ಶ್ರೀ ಹೆಚ್. ವಿಕಾಂತಯ್ಯ : ಮಾನ್ಯ ಅಧ್ಯಕ್ಷರೇ

(ಗೊಂದಲ)

ಅಧ್ಯಕ್ಷರು : ನೀವು ಅಲ್ಲಿ ನಡೆದಿರಬಹುದಾದ ಘಟನೆಗಳ ಬಗ್ಗೆ ಸಾಕಷ್ಟು ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಮಾನ್ಯ ಗೃಹ ಸಚಿವರು ಇದರ ಬಗ್ಗೆ ವಿಚಾರಣೆ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ನೀವು ಯಾರಾದರೂ ಹೊಸದಾಗಿ ಹೇಳುವುದಿದ್ದರೆ ಹೇಳಿ, ಅವರು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ತಾವು ಅವರನ್ನು ನೋಡಿದ್ದೀರಿ. ಮಾನ್ಯ ಗೃಹ ಸಚಿವರು ಇದರ ಬಗ್ಗೆ ಉತ್ತರ ಹೇಳಬೇಕು..

(ಗೊಂದಲ)

ಅಧ್ಯಕ್ಷರು : ಇದರ ಬಗ್ಗೆ ಸಾಕಷ್ಟು ಪ್ರಸ್ತಾಪ ಆಗಿದೆ. ಹೊಸದಾಗಿ ಹೇಳುವುದು ಏನಾದರೂ ಇದ್ದರೆ ಹೇಳಿ..

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ನ್ಯಾಯಾಂಗ ತನಿಖೆ ಮಾಡಲಿ...

ಶ್ರೀ ಹೆಚ್. ವಿಕಾಂತಯ್ಯ : ಪೋಲೀಸ್ ಅಧಿಕಾರಿಗಳು ಅನಿವಾರ್ಯ ಸಂದರ್ಭದಲ್ಲಿ ಹೊರತಾಗಿ ಅತಿಯಾಗಿ ವರ್ತಿಸುವುದಿಲ್ಲವಾದ್ದರಿಂದ ಯಾವುದೇ ಪೋಲೀಸ್ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಿಲ್ಲ ಎಂಬುದನ್ನು ಮಾನ್ಯ ಸಚಿವರು ಹೇಳಿದ್ದರೆ. ಈ ಮಾತನ್ನು ಹೇಳಿದವರು ಯಾರು? ಮಾನ್ಯ ಗೃಹ ಮಂತ್ರಿಗಳು. ಇಲ್ಲಿ ವಿಚಾರಣೆ ಮಾಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಅವರು ತಪ್ಪು ಮಾಡಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಗೃಹ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ಹೆಚ್. ವಿಶ್ವಾಂತಯ್ಯ : ಅವರು ಹೇಳುವುದಕ್ಕಿಂತ ಮುಂಚೆ ನಾನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಹೋಂ ಮಿನಿಸ್ಟರ್ ಏನು ಹೇಳುತ್ತಾರೋ ಕೇಳೋಣ..

ಶ್ರೀ ವಾಟಾಳ್ ನಾಗರಾಜ್ : ಈ ಸಭೆಯಲ್ಲಿ ಚರ್ಚೆ ಆಗುತ್ತಿದೆ. ಈ ಬಗ್ಗೆ ಮಾನ್ಯ ಗೃಹ ಸಚಿವರು ಹೇಳಿಕೆ ನೀಡಲಿ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನಗೆ ಅವರನ್ನು ನೋಡಿ ಕನಿಕರ ಬಂತು, ಕಣ್ಣೀರು ಬಂತು. ಅವರ ಬೆನ್ನಿಗೆ ಹೊಡೆದಿದ್ದಾರೆ, ಕಾಲಿಗೆ ಹೊಡೆದಿದ್ದಾರೆ, ಎಲ್ಲಾ ಕಡೆ ಹೊಡೆದಿದ್ದಾರೆ.

(ಗೊಂದಲ)

ಶ್ರೀ ಹೆಚ್. ವಿಶ್ವಾಂತಯ್ಯ : ಮಾನ್ಯ ಸಚಿವರು ಪೋಲೀಸರು ತಪ್ಪು ಮಾಡಿಲ್ಲ, ಶಿಸ್ತಿನ ಕ್ರಮ ಅನಗತ್ಯ ಎಂದು ಹೇಳುತ್ತಿದ್ದಾರೆ. ಒಂದು ಕಡೆ ವಿಚಾರಣೆ ಮಾಡುತ್ತೇವೆ ಎಂದು ಹೇಳುತ್ತಾರೆ, ಇದು ಯಾವ ನ್ಯಾಯ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದೌರ್ಜನ್ಯ ನಡೆದಿದೆ. ಹೌಸ್‌ನಲ್ಲಿ ಈಗ ಉತ್ತರ ಕೊಡಬೇಕು. ನ್ಯಾಯಾಂಗ ತನಿಖೆ ಮಾಡುವುದಕ್ಕೆ ಏನು ಅಡಚಣೆ ಇದೆ ?

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ....

ಶ್ರೀ ಕೆ. ನಾರಾಯಣಸ್ವಾಮಿ : ಪೋಲೀಸ್ ದೌರ್ಜನ್ಯ ನೋಡಿ ಹೇಗೆ ಇದೆ? ಅವರು ಹೊಡೆದಿರುವ ಬಗ್ಗೆ ಈ ಬಟ್ಟೆಯನ್ನು ಪರಿಶೀಲಿಸಿ, ಹೇಗೆ ಹೊಡೆದಿದ್ದಾರೆ. (ಮಾನ್. ಸದಸ್ಯರು ಈ ಸಂದರ್ಭದಲ್ಲಿ ರಕ್ತ ಸಿಕ್ತ ಬಟ್ಟೆಗಳನ್ನು ಸಭೆಯಲ್ಲಿ ಪ್ರದರ್ಶಿಸಿದರು)

(ಗೊಂದಲ)

ಅಧ್ಯಕ್ಷರು : ಈಗ ಮುಖ್ಯಮಂತ್ರಿಗಳು ಹೇಳುತ್ತಾರೆ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಯ ರೈತರ ಮೇಲೆ ಬಹಳ ಅನ್ಯಾಯವಾಗಿದೆ. ತೊಂದೆಗೊಳಗಾದ ಜನರು ಇಲ್ಲಿಯೇ ಹೊರಗೆ ಇದ್ದಾರೆ, ಮಾನ್ಯ ಮುಖ್ಯಮಂತ್ರಿಯವರು ಅವರನ್ನು ನೋಡಿದರೆ ಗೊತ್ತಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಆರ್ಡರ್.. ಆರ್ಡರ್.. ದಯವಿಟ್ಟು ತಾವು ಕುಳಿತುಕೊಳ್ಳಿ...

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈ ವಿಷಯ ಈ ಸದನದಲ್ಲಿ ಈಗಾಗಲೇ ಒಂದು ಸಾರಿ ಪ್ರಸ್ತಾಪಕ್ಕೆ ಬಂದಿದೆ. ಚರ್ಚೆಯಾದಾಗ ಸರ್ಕಾರದ ಪರವಾಗಿ ನಾವು ಉತ್ತರವನ್ನು ಕೊಟ್ಟಿದ್ದೇವೆ. ಆ ದಿವಸವೇ ಜ್ಯುಡಿಶಿಯಲ್ ಎನ್‌ಕ್ವಾಯರಿ ಆಗಬೇಕೆನ್ನುವ ಬೇಡಿಕೆಯನ್ನು ಮತ್ತು ಒತ್ತಾಯವನ್ನು ಮಾಡಿದ ಹಿನ್ನಲೆಯಲ್ಲಿ ತಾವುಗಳು

ಆ ಒಂದು ವಾದವನ್ನು ಇಟ್ಟಿರತಕ್ಕಂಥ ಸಂದರ್ಭದಲ್ಲಿ ಯಾವ ರೀತಿಯಾಗಿರತಕ್ಕಂಥ ವಿಚಾರಣೆಯನ್ನು ಮಾಡುತ್ತೇವೆ ಎಂಬುದನ್ನು ನಾವು ತಿಳಿಸಿದ್ದೇವೆ. ಈ ಮಧ್ಯೆ ನಡೆದ ವಿಚಾರಗಳು ನನ್ನ ಗಮನಕ್ಕೆ ಬಂದಿವೆ. ಮಾನ್ಯ ಜಾಲಪ್ಪನವರಿಗಾಗಲಿ, ತಮಗಾಗಲಿ ವಿಚಾರಗಳು ಗೊತ್ತಿವೆ. ಅದೇರೀತಿಯಲ್ಲಿ ಪೆಟ್ಟು ತಿಂದವರು ಕೂಡ ಇಲ್ಲಿಗೆ ಬಂದಿದ್ದಾರೆ ಎಂಬುದು ಕೂಡ ನಮ್ಮ ಗಮನಕ್ಕೆ ಬಂದಿದೆ. ಆ ದಿವಸ ಈ ವಿಚಾರ ಚರ್ಚೆಯಾದ ಮೇಲೆ ಕೆಲವು ವಿವರಗಳನ್ನು ನಾವು ಪಡೆದುಕೊಳ್ಳಬೇಕೆಂದು ಪ್ರಯತ್ನವನ್ನು ಮಾಡಿದ್ದೇವೆ. ಆ ಬಗ್ಗೆ ಮ್ಯಾಜಿಸ್ಟ್ರೀಯಲ್ ಎನ್‌ಕ್ವಾಯರಿಯನ್ನು ಮಾಡುತ್ತೇವೆ ಎಂದು ಹೇಳಿದ್ದೇವೆ. We have announced the Magistrial Enquiry on that day. ನಾವು ಮಾಡುತ್ತೇವೆ ಎಂದು ಹೇಳಿದ್ದೇವೆ. ಈ ಮಧ್ಯೆ ಪೆಟ್ಟು ತಿಂದಿರತಕ್ಕಂಥವರ ಬಟ್ಟೆಗಳು ರಕ್ತಮಯವಾದುದನ್ನು ಕೂಡ ತಾವು ತಿಳಿಸಿದ್ದೀರಿ. These are all the matters for investigation. ತನಿಖೆಯಲ್ಲಿ ಬರತಕ್ಕಂಥ ವಿಚಾರಗಳು, ಕಾನೂನಿನ ವಿಚಾರದಲ್ಲಿ ತಾವು, ನಾವು , ಎಲ್ಲರೂ ಒಪ್ಪಲೇಬೇಕಾಗುತ್ತದೆ. ತಾವುಗಳು ಹೇಳುವುದು ನಿಜವಲ್ಲವೆಂದು ನಾನು ಹೇಳುತ್ತಾ ಇಲ್ಲ. ಆದರೆ ತನಿಖೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ವಿಚಾರಗಳು, ಅನಂತರ ಅಧಿಕಾರಿಗಳು ಯಾರೇ ತಪ್ಪಿತಸ್ಥರು ಇರಬಹುದು, ಮೇಲ್ನೋಟಕ್ಕೆ ಅವರು ತಪ್ಪಿತಸ್ಥರು ಎಂದು ಕಂಡುಬಂದಾಗ ಕೊನೆಪಕ್ಷ ಕೆಲವರನ್ನು ಅಮಾನತ್ತಿನಲ್ಲಿಡಬೇಕಾದ ವಿಚಾರ. ಅದು ಪೋಲೀಸ್ ಇರಬಹುದು, ತಹಶೀಲ್ದಾರ್ ಇರಬಹುದು, ಮತ್ತೊಬ್ಬರು ಇರಬಹುದು. ಈಗ ಈ ವಿಚಾರವನ್ನು ತಾವು ಪುನಃ ಪ್ರಸ್ತಾಪ ಮಾಡಿದ್ದೀರಿ. ಇದು ನಿಯಮಾವಳಿಗಳ ಪ್ರಕಾರ ಕಾನೂನು ಪ್ರಕಾರ ಬರದಿದ್ದರೂ ಕೂಡ ಮಾನ್ಯ ಅಧ್ಯಕ್ಷರು, ವಿಷಯದ ಪ್ರಾಮುಖ್ಯತೆಯನ್ನು ಅರಿತು, ನಿಯಮಾವಳಿಗಳಲ್ಲಿ ಇಲ್ಲದಿದ್ದರೂ ಕೂಡ ಅದಕ್ಕೆ ಅವಕಾಶ ಕೊಟ್ಟಿರತಕ್ಕಂಥಾದ್ದು ಏತಕ್ಕೆ ಅಂದರೆ ಈ ಬಗ್ಗೆ ಸರಕಾರ ಮತ್ತೊಮ್ಮೆ ವಿಚಾರ ಮಾಡಬೇಕು. ಎಂಬ ಸದಭಿಪ್ರಾಯದಿಂದ ಅವಕಾಶವನ್ನು ಕೊಟ್ಟಿದ್ದಾರೆ. ಆ ಉದ್ದೇಶದಿಂದ ಚರ್ಚೆಗೆ ಅಣುವು ಮಾಡಿಕೊಟ್ಟಿದ್ದಾರೆ.

ಅಲ್ಲಿ ಪೆಟ್ಟು ತಿಂದವರು ಯಾರಿದ್ದಾರೆ ಅವರನ್ನು ನೋಡಬಾರದು ಎಂಬ ಅಭಿಪ್ರಾಯವು ನಮ್ಮಲ್ಲಿ ಇಲ್ಲ. ಹಾಗೆಯೇ ಅಂಥ ಅಭಿಪ್ರಾಯವು ಇರಲೂಬಾರದು. ಆಡಳಿತದಲ್ಲಿ ಇರತಕ್ಕಂಥವರು ಇಂಥ ಬೇಟಿ ಮಾಡತಕ್ಕಂಥ ಸಂದರ್ಭ ಬಂದಾಗ ಮಾಡಬೇಕಾಗುತ್ತದೆ. ಅದಕ್ಕಾಗಿ ಮಾನ್ಯ ಗೃಹಸಚಿವರನ್ನು ಕರೆದು ಅವರು ಆ ಜನರನ್ನು ಬೇಟಿ ಮಾಡುವಂತೆ ಮತ್ತು ಅವರಿಂದ ವಿಚಾರಗಳನ್ನು ತಿಳಿದುಕೊಳ್ಳುವಂತೆ ಕೇಳಿಕೊಂಡಿದ್ದೇನೆ. ಪೆಟ್ಟು ತಿಂದವರ ಬಾಯಿಯಿಂದಲೇ ಎಲ್ಲಾ ವಿವರಗಳನ್ನು ಗೃಹಸಚಿವರು ಪಡೆದುಕೊಳ್ಳಲಿ ಎಂಬುದು ನಮ್ಮ ಉದ್ದೇಶ. ಅವರು ಸರಕಾರದ ಪರವಾಗಿ ವಿವರಗಳನ್ನು ಪಡೆಯುತ್ತಾರೆ.ನಾಳೆಯ ದಿವಸ ಅಮಾನತ್ತಿನಲ್ಲಿ ಇಡುವುದಾದರೂ ಯಾರನ್ನು ಇಡಬೇಕು ವಿಚಾರವೂ ಇದರಲ್ಲಿ ಸೇರಿಕೊಂಡಿದೆ. ಅದನ್ನು ಕೂಡ ನಾವು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕು, ಅದನ್ನು ತೆಗೆದುಕೊಳ್ಳುತ್ತೇವೆ. ಅವರ ವಿಚಾರವನ್ನು ತಿಳಿದುಕೊಂಡಾದ ಮೇಲೆ ನಾವು ಒಂದು ಅಭಿಪ್ರಾಯಕ್ಕೆ ಬರುತ್ತೇವೆ. ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡಬೇಕೇ, ಬೇಡವೆ ಎಂಬ ಒಂದು ತೀರ್ಮಾನಕ್ಕೆ ನಾವು ಬರುತ್ತೇವೆ. ಆದುದರಿಂದ ಈ ಬಗ್ಗೆ ತಾವುಗಳು ದಯಮಾಡಿ ತೀರ್ಮಾನ ಮಾಡುವ ವಿಚಾರವನ್ನು ಸರಕಾರಕ್ಕೆ ಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದಲ)

ಅಧ್ಯಕ್ಷರು : ಯಾವ ಸರಕಾರವೂ ಇದಕ್ಕಿಂತ ಮುಂದೆ ಹೋಗುವುದಕ್ಕೆ ಸಾಧ್ಯವಿಲ್ಲ. ಗೃಹಸಚಿವರು ಕೂಡ ಆ ಪೆಟ್ಟು ತಿಂದ ಜನರನ್ನು ಭೇಟಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದುದರಿಂದ ವಿಷಯವನ್ನು ಅಲ್ಲಿಗೆ ಮುಗಿಸಿ...

2) ಬೆಳ್ಳಾವಿಯಲ್ಲಿ ವಿದ್ಯುತ್ ಅಭಾವದಿಂದ ರೈತರು ಕೆ.ಇ.ಬಿ. ಆಫೀಸಿಗೆ ಮುತ್ತಿಗೆ ಹಾಕಿರುವುದು.

1.45 ಪಿ.ಎಂ.

ಶ್ರೀ ಆರ್. ನಾರಾಯಣ್ : ಅಧ್ಯಕ್ಷರೇ, ನನಗೊಂದು ನಿಮಿಷ ಅವಕಾಶ ಕೊಡಿ. ನಮ್ಮ ಕ್ಷೇತ್ರದಲ್ಲಿ ವಿದ್ಯುತ್ ಅಭಾವವಾಗಿರುವ ಬಗ್ಗೆ ಹೇಳಬೇಕಾಗಿದೆ. ತಮ್ಮ ಕ್ಷೇತ್ರಗಳಿಗೆ ನಾವು ಹೋಗುವುದಕ್ಕೆ ಆಗುತ್ತಿಲ್ಲ ಸಾವಿರಾರು ಜನ ರೈತರು ಕೆಇಬಿ ಆಫೀಸ್‌ಗೆ ಮುತ್ತಿಗೆ ಹಾಕಿದ್ದಾರೆ. ಇದರ ಬಗ್ಗೆ ಸರ್ಕಾರ ಏನಾದರೂ ಹೇಳಬೇಕು. ಹಿಂದೆ ಸರ್ಕಾರಕ್ಕೆ ಎಷ್ಟು ಹೇಳಿಕೊಂಡಿದ್ದರೂ ಏನೂ ಉಪಯೋಗವಾಗಿಲ್ಲ. ಮಳೆ ಕೂಡ ಇಲ್ಲ. ನಾವು ಕ್ಷೇತ್ರಕ್ಕೆ ಹೋಗದಂತಾಗಿದೆ ಆದ್ದರಿಂದ ಸರ್ಕಾರ ಆದೇಶ ಕೊಡಬೇಕಾಗುತ್ತದೆ. ಸಾವಿರಾರು ಜನ ರೈತರು ಮುತ್ತಿಗೆ ಹಾಕಿ ಕುಳಿತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಸುಮ್ಮನಿರಿ, ಯಾರ ಮುಂದೆ ಈ ರೋಧನ, ಕೇಳುವವರು ಯಾರಾದರೂ ಇದ್ದಾರೆಯೇ ?

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಆ ಕಡೆ ಮುಖ್ಯಮಂತ್ರಿಗಳ ಸುತ್ತ ಕೆಲವು ಘೆರಾವ್ ಮಾಡಿದ್ದಾರೆ ಆದರಿಂದ ಅವರನ್ನು ಮುಕ್ತಗೊಳಿಸಬೇಕು.

ಶ್ರೀ ಆರ್. ನಾರಾಯಣ್ : ತುಮಕೂರು ಜಿಲ್ಲೆಯಲ್ಲಿ ಎರಡು ಮೂರು ದಿವಸಗಳಿಂದ ಕರೆಂಟ್ ಇರಲಿಲ್ಲ ಹೇಳುವವರು ಕೇಳುವವರು ಯಾರೂ ಇಲ್ಲದಂತಾಗಿದೆ.

ಶ್ರೀ ಷಫಿ ಅಹಮದ್ : 8 ದಿವಸದಿಂದ ಕರೆಂಟ್ ಇಲ್ಲದೆ ಜನ ಕಂಗೆಟ್ಟುಹೋಗಿದ್ದಾರೆ.

(ಗೊಂದಲ)

ಅಧ್ಯಕ್ಷರು : ಬಾಯಿಗೆ ಬಂದಿದ್ದನ್ನು ಹೇಳುತ್ತೀದ್ದೀರಿ, ಅದಕ್ಕೆ ವಿಧಾನವೇ ಇಲ್ಲವೇ? ನಿಯಮಾವಳಿಗೆ ಮರ್ಯಾದೆ ತೋರಬೇಡವೇ? ದಿಕ್ಕೆಟ್ಟ ರೀತಿಯಲ್ಲಿ ನಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಆರ್. ನಾರಾಯಣ್ : ಪರಿಸ್ಥಿತಿ ಹಾಗಿದೆ ಸ್ವಾಮಿ.

ಅಧ್ಯಕ್ಷರು : ಹಾಗಿದ್ದರೆ ಪರಿಸ್ಥಿತಿಯನ್ನು ನಿಮ್ಮ ಕೈಗೆ ತೆಗೆದುಕೊಳ್ಳಿ, ವಿಧಾನಸಭೆ ಏತಕ್ಕೆ ಬೇಕು? You should have shown me the basic courtesy of coming to my Chamber and brought to my notice.

SHRI R. NARAYAN :Certain things we cannot stand formalities.

ಅಧ್ಯಕ್ಷರು : ನಾನು ಏನು ಮಾಡಬೇಕು ಹೇಳಿ?

ಶ್ರೀ ಆರ್. ನಾರಾಯಣ್ : ದಯವಿಟ್ಟು ಸರ್ಕಾರಕ್ಕೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹೇಳಿ.